ಶ್ರೀ ಅಜೀಜ್ ಸೇಠ್ (ಆಹಾರ ಸಚಿವರು).—ಮಾನ್ಯ ಸದಸ್ಯರು ಏನೇನು ದೂರುಗಳನ್ನು ಮಾಡಿದ್ದಾರೆ ಅವೆಲ್ಲ ಆಗಲೇ ಸಾಕಷ್ಟು ನನ್ನ ಗಮನಕ್ಕೆ ಬಂದಿದೆ. ಆಹಾರ ಪದಾರ್ಥಗಳು ಮತ್ತು ಸೀಮೆಎಣ್ಣೆ ವಿತರಕರು ಏನಾದರು ತಪ್ಪು ಮಾಡಿದರೆ ನಾನು ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಅವರ ವಿರುದ್ಧ ಕ್ರಮ ಕೈಗೊಂಡು ಈ ಸಾರ್ವಜನಿಕ ಡಿಸ್ಟ್ರಿಬ್ಯೂಷನ್ ಸಿಸ್ಟಮನ್ನು ಎಫೆಕ್ಟೀವಾಗಿ ಜಾರಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಾನು ಈ ಸದನದ ಎಲ್ಲ ಸದಸ್ಯರಲ್ಲೂ ವಿನಂತಿಮಾಡಿ ಕೊಳ್ಳುವುದೇನೆಂದರೆ, ಈ ಆಹಾರ ಪದಾರ್ಥಗಳ ಮತ್ತು ಸೀಮೆಎಣ್ಣೆ ಬೆಲೆಗಳನ್ನು ವಿರಿಸುವ ಕೆಟ್ಟ ಪದ್ಧತಿ ಏನು ಇದೆಯೋ, ಅದನ್ನು ತಪ್ಪಿಸಲು ಪರಿಣಾಮಕಾರಿಯಾದ ಸಲಹೆಗಳನ್ನು ಕೊಡಲಿ, I would like to receive with thanks. I assure you that I will take action. ಹಿಂದೆ ಮಾನ್ಯ ಜಾರ್ಜ್ ಅವರು ಇದರ ಉಸ್ತುವಾರಿಯಲ್ಲಿದ್ದರು. ಅವರಿಗೆ ಸಹ ತಾವು ಹೇಳಿರಬಹುದು. ಈಗ ನಾನು ಕೇಳುತ್ತಿದ್ದೇನೆ. ಸದಸ್ಯರು ಧಮಯಿಟ್ಟು ತಿಳಿಸಲಿ. ಈಗ ನಾನು ಪ್ರತಿ ಗ್ಯಾಸ್ ಕಾರ್ಡ್ ಹೋಲ್ಡರ್‌ಗೆ ೬ ಲೀಟರ್ ಸೀಮೆಎಣ್ಣೆ ಅನಿಲರಹಿತ ಕಾರ್ಡ್ ಹೋಲ್ಡರ್ಸ್‌ಗೆ ತಿಂಗಳಿಗೆ ೧೭ ಲೀಟರ್ ಕೊಡಬೇಕೆಂದು ಆಜ್ಞೆ ಮಾಡಿದ್ದೇನೆ. ಆಮೇಲೆ ಯಾರೋ ಒಬ್ಬ ಸದಸ್ಯರು ಬರೀ ಎರಡು ಲೀಟರ್ ಕೆರೋಸಿನ್ ಕೊಟ್ಟಿದ್ದಾರೆಂಬ ಹೇಳಿರುವುದನ್ನು ಪರಿಶೀಲನೆ ಮಾಡುತ್ತೇನೆ. ತಾವುಗಳು ಸಲಹೆ ಕೊಟ್ಟರೆ ನಾನು ಅದನ್ನು ತೀವ್ರವಾಗಿ ಪರಿಶೀಲಿಸುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ.—ಇದನ್ನೆಲ್ಲ ತಪ್ಪಿಸಲು ವಿಜಿಲೆನ್ಸ್ ಸ್ಕ್ವಾಡ್ ಇದೆ, ಅದೇನು ಮಾಡುತ್ತಿದೆ ?

ಶ್ರೀ ಅಜೀಜ್ ಸೇಠ್.—ನಾನು ತೀವ್ರವಾಗಿ ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಅದರ ಪ್ರಕಾರ I will try to improve it.

ನಿಯಮ ೩೩೪ರ ಮೇರೆಗೆ

೧) ರಾಜ್ಯದ ಸಹಕಾರಿ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರನ್ನು ಸರ್ಕಾರಿ ನೌಕರರಂತೆ ಪರಿಗಣಿಸುವುದು.

ಉಪಾಧ್ಯಕ್ಷರು.—ಶ್ರೀ ಪೆರಿಕಲ್ ಮಲ್ಲಪ್ಪನವರು ಆಬ್ಸೆಂಟ್. ನೆಕ್ಸ್ಟ್.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಸಹಕಾರಿ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರನ್ನು ಸರಕಾರಿ ನೌಕರರ ರೀತಿಯಲ್ಲಿ ಈಗ ಪರಿಗಣಿಸಿಲ್ಲ. ಆದಕಾರಣ ಸಹಕಾರಿ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರನ್ನು ಸರಕಾರಿ ನೌಕರರನ್ನು ಪರಿಗಣಿಸಿದಂತೆ ಪರಿಗಣಿಸಿ ಅದೇ ರೀತಿಯ ವೇತನ ಇತ್ಯಾದಿ ವ್ಯವಸ್ಥೆಗಳನ್ನು ಮಾಡಬೇಕಾಗಿದೆ. ಆ ರೀತಿ ಸರಕಾರ ತೀಘ್ರ ಕಾರ್ಯಕ್ರಮ ತೆಗೆದುಕೊಳ್ಳುವುದೇ ? ಈ ಕುರಿತು ಸಹಕಾರ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಸಹಕಾರ ಸಂಘ ಸಂಸ್ಥೆಗಳ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ಬಗ್ಗೆ ಕೂಲಂಕುಷವಾಗಿ ಈಗಾಗಲೇ ಪರಿಶೀಲಿಸಲಾಗಿದ್ದು ಸಹಕಾರ ಸಂಘಗಳ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಸಾಧ್ಯವಾಗದುವುದಿಲ್ಲವೆಂದು ನಿರ್ಧರಿಸಲಾಗಿದೆ. ಆದರೆ ಸಹಕಾರ ಸಂಘಸಂಸ್ಥೆಗಳ ನೌಕರರ ವೇತನ ಇತ್ಯಾದಿ ವ್ಯವಸ್ಥೆಗಳನ್ನು ಉತ್ತಮ ಪಡಿಸುವ ಬಗ್ಗೆ ಸಹಕಾರ ಸಂಘ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಆಧಾರದ ಮೇಲೆ ಪರಿಗಣಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

೨) ತಾಲ್ಲೂಕಿನ ಮಟ್ಟದಲ್ಲಿ ಸರ್ಕಾರಿ ಭೂಮಿಯನ್ನು ಸ್ಥಳೀಯ ಸಂಸ್ಥೆಗಳ ಕಟ್ಟಡಗಳಿಗೆ ಮುಂಫತ್ತಾಗಿ ನೀಡಲು ಒತ್ತಾಯ.

ಶ್ರೀ ಒಸವರಾಜ್ (ಬ್ರಹ್ಮಾವರ) ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಉದ್ದೇಶಗಳಿಗಾಗಿ ಹಿಂದೆ ಸರ್ಕಾರಿ ಭೂಮಿಯನ್ನು ಮುಂಫತ್ತಾಗಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಹಾಗೂ ಗ್ರಾಮ ಪಂಚಾಯತ್‌ಗಳಿಗೆ ಕೊಡಲಾಗುತ್ತಿತ್ತು. ಆದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಈ ರೀತಿ ಭೂಮಿ ನೀಡದೆ, ಭೂಮಿಯು ಕ್ರಯ ತೆರಲು ಕಂದಾಯ